## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ ನಂಃ 56/2024

ಸಿಡಬ್ಲ್ಯೂಃ 2 ಪಿಡಬ್ಲ್ಯೂಃ 2

| | |
|---|---|
| ಹೆಸರುಃ | ರಾಜೇಶ |
| ತಂದೆ/ಗಂಡನ ಹೆಸರುಃ | ನೀಲಕಂಠ |
| ವಯಸ್ಸುಃ | 42 ವರ್ಷ |
| ಉದ್ಯೋಗಃ | ಖಾಸಗಿ ನೌಕರ |
| ವಾಸಃ | ಹಳಗೆಜೊಗ್, ಕಾರವಾರ |

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 15-11-2024 ರಂದು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಎ.ಪಿ.ಪಿ. ರವರಿಂದಃ**

ದಿಃ 31-08-2023 ರಂದು ಚಿತ್ತಾಕುಲ ಪೋಲೀಸ ಠಾಣೆಗೆ ಪೋಲೀಸರು ನನ್ನನ್ನು ಹಾಗೂ ಚಾಸಾ-3 ರವರನ್ನು ರಸ್ತೆ ಅಪಘಾತದ ವಿಚಾರವಾಗಿ ಚಿತ್ತಾಕುಲ ಪೋಲೀಸ ಠಾಣೆಗೆ ಪಂಚರಾಗಿ ಬರುವಂತೆ ಕರೆದಿದ್ದು, ಪೋಲೀಸ ಠಾಣೆಯಲ್ಲಿ ಎರಡು ದ್ವಿ ಚಕ್ರ ವಾಹನಗಳು ಇದ್ದು, ವಾಹನ ಪರಿಶೀಲನಾ ಪಂಚನಾಮೆಯನ್ನು ಮದ್ಯಾಹ್ನ 12-00 ರಿಂದ 1-00 ವರೆಗೆ ತಯಾರಿಸಿ ಭಾವಚಿತ್ರಗಳನ್ನು ತೆಗೆದಿರುತ್ತಾರೆ. ಪಂಚನಾಮೆ ಮಾಡುವ ಪೂರ್ವದಲ್ಲಿ ನಮಗೆ ನೋಟೀಸ ನೀಡಿರುತ್ತಾರೆ. ನಂತರ ನಮ್ಮನ್ನು ಅಪಘಾತ ಸ್ಥಳವಾದ ಬಿತ್ತಲ್ ಭಾಗ್ ಮಾರುತಿ ದೇವಸ್ಥಾನದ ಹತ್ತಿರ ರಾಷ್ಟ್ರೀಯ ಹೆದ್ದಾರಿಯಲ್ಲಿ ಕರೆದುಕೊಂಡು ಹೋಗಿದ್ದು ಅಲ್ಲಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಅಪಘಾತ ಸ್ಥಳದ ಪಂಚನಾಮೆಯನ್ನು ತಯಾರಿಸಿ , ನಕಾಶೆಯನ್ನು ತಯಾರಿಸಿರುತ್ತಾರೆ ಮತ್ತು ಆ ಸಮಯದಲ್ಲಿ ಘಟನಾ ಸ್ಥಳದ ಭಾವಚಿತ್ರಗಳನ್ನು ತೆಗೆದಿರುತ್ತಾರೆ. ಘಟನಾ ಸ್ಥಳದಲ್ಲಿ ಒಂದು ಹೆಲ್ಮೆಟ್ ಇದ್ದು , ಪಂಚನಾಮೆಯನ್ನು ಮಾಡುವ ಕಾಲಕ್ಕೆ ಪೋಲೀಸರು ಸದರಿ ಹೆಲ್ಮೆಟ್ ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ.

ಸಾಕ್ಷಿಯು ಪೋಲೀಸರು ನೀಡಿದ ನೋಟೀಸನ್ನು ನಿ.ಪಿ-1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ನಿ.ಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿ.ಪಿ-2 ವಾಹನ ಪರಿಶೀಲನಾ ಪಂಚನಾಮೆರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ನಿ.ಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿ.ಪಿ-3 ರಿಂದ 6 ಭಾವ ಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಅಪಘಾತ ಸ್ಥಳದ ಪಂಚನಾಮೆ ನಿ.ಪಿ-7 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ನಿ.ಪಿ-7(ಬಿ) ಎಂದು ಗುರುತಿಸಲಾಯಿತು. . ಸಾಕ್ಷಿಯು ನಿ.ಪಿ-8 ಕಚ್ಚಾ ನಕಾಶೆ ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ನಿ.ಪಿ-8(ಬಿ) ಎಂದು ಗುರುತಿಸಲಾಯಿತು. . ಸಾಕ್ಷಿಯು ನಿ.ಪಿ-9 ಮತ್ತು 10

ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಮು.ಮಾ-1 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ ಎನ್ ಜೆ ನ್ಯಾಯವಾದಿರವರಿಂದಃ**

ಅಪಘಾತದಲ್ಲಿ ಮೃತಪಟ್ಟ ಜಗದೀಪ ನಾಗೇಕರ್ ಇವರು ನನ್ನ ದೂರದ ಸಂಬಂಧಿಕರು ಇರುತ್ತಾರೆ. ಘಟನಾ ಸ್ಥಳವನ್ನು ಚಾಸಾ-1 ರವರು ತೋರಿಸಿರುತ್ತಾರೆ. ಪೋಲಿಸರು ನಮಗೆ ದೂರವಾಣಿ ಕರೆ ಮಾಡಿ ಪಂಚನಾಮೆಗೆ ಬರುವಂತೆ ತಿಳಿಸಿರುತ್ತಾರೆ. ಅಪಘಾತದಲ್ಲಿ ಭಾಗಿಯಾದ ವಾಹನಗಳ ನೋಂದಣಿ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ನಾನು ಆ ದಿನ ಪೋಲೀಸ ಠಾಣೆಗೆ ಹೋಗಿರುವುದಿಲ್ಲ, ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಯಾವುದೇ ವಾಹನ ಪರಿಶೀಲನಾ ಪಂಚನಾಮೆ ಅಥವಾ ಘಟನಾ ಸ್ಥಳದ ಪಂಚನಾಮೆ ಮಾಡಿರುವುದಿಲ್ಲ, ನಕಾಶೆ ತಯಾರಿಸಿರುವುದಿಲ್ಲ, ಭಾವ ಚಿತ್ರ ತೆಗೆದಿರುವುದಿಲ್ಲ ಎಂರದೆ ಸರಿಯಲ್ಲ. ಅಪಘಾತದಲ್ಲಿ ಮೃತ ಪಟ್ಟ ಜಗದೀಪ್ ನಾಗೇಕರ್ ಹಾಗೂ ಈ ಪ್ರಕರಣದ ಚಾಸಾ-1 ರವರು ನನ್ನ ಸಂಬಂದಿಕರಾಗಿದ್ದುದ್ದರಿಂದ ಸದರಿ ಜಗದೀಪ್ ನಾಗೇಕರ್ ಇವರಿಗೆ ಕುಟುಂಬಕ್ಕೆ ಅಪಘಾತ ವಿಮೆ ಬರಲಿ ಎನ್ನುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳ ಹಾಗೂ ವಾಹನ ಪರಿಶೀಲನಾ ಪಂಚನಾಮೆಯನ್ನು ಪೋಲೀಸರು ನಾವು ಠಾಣೆಗೆ ಹೋಗುವ ಪೂರ್ವದಲ್ಲಿಯೇ ಬರೆದು ತಯಾರಿಸಿದ್ದು, ಅವರ ಕೋರಿಕೆಯ ಮೇರೆಗೆ ಪೋಲೀಸ ಠಾಣೆಯಲ್ಲಿ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ-3 ನನ್ನ ಸಂಬಂಧಿಕರು ಇರುವುದಿಲ್ಲ. ಮೃತ ಜಗದೀಪ ನಾಗೇಕರ್ ಇವರು ನನ್ನ ಹತ್ತಿರದ ಸಂಬಂದಿ ಇರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರು ಘಟನಾ ಸ್ಥಳದಲ್ಲಿ ಮು.ಮಾ-1 ನ್ನು ಜಪ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**ಸಹಿ ಇದೆ .**

**ಪ್ರ.ದ.ನ್ಯಾದಂ. ಕಾರವಾರ**

## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ ನಂಃ 56/2024

ಸಿಡಬ್ಲ್ಯೂಃ 3 ಪಿಡಬ್ಲ್ಯೂಃ 1

| | |
|---|---|
| ಹೆಸರುಃ | ಸಚೀನ್ ಕೊಟಾರಕರ್ |
| ತಂದೆ/ಗಂಡನ ಹೆಸರುಃ | ಕೃಷ್ಣಾ ಕೊಟಾರಕರ್ |
| ವಯಸ್ಸುಃ | 39 ವರ್ಷ |
| ಉದ್ಯೋಗಃ | ಖಾಸಗಿ ನೌಕರ |
| ವಾಸಃ | ಹಳಗೆಜೊಗ್, ಕಾರವಾರ |

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 15-11-2024 ರಂದು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಎ.ಪಿ.ಪಿ. ರವರಿಂದಃ**

ದಿಃ 31-08-2023 ರಂದು ಚಿತ್ತಾಕುಲ ಪೋಲೀಸ ಠಾಣೆಗೆ ಪೋಲೀಸರು ನನ್ನನ್ನು ಹಾಗೂ ಚಾಸಾ-2 ರವರನ್ನು ರಸ್ತೆ ಅಪಘಾತದ ವಿಚಾರವಾಗಿ ಚಿತ್ತಾಕುಲ ಪೋಲೀಸ ಠಾಣೆಗೆ ಪಂಚರಾಗಿ ಬರುವಂತೆ ಕರೆದಿದ್ದು, ಪೋಲೀಸ ಠಾಣೆಯಲ್ಲಿ ಎರಡು ದ್ವಿ ಚಕ್ರ ವಾಹನಗಳು ಇದ್ದು, ವಾಹನ ಪರಿಶೀಲನಾ ಪಂಚನಾಮೆಯನ್ನು ಮದ್ಯಾಹ್ನ 12-00 ರಿಂದ 1-00 ವರೆಗೆ ತಯಾರಿಸಿ ಭಾವಚಿತ್ರಗಳನ್ನು ತೆಗೆದಿರುತ್ತಾರೆ. ಪಂಚನಾಮೆ ಮಾಡುವ ಪೂರ್ವದಲ್ಲಿ ನಮಗೆ ನೋಟೀಸ ನೀಡಿರುತ್ತಾರೆ. ನಂತರ ನಮ್ಮನ್ನು ಅಪಘಾತ ಸ್ಥಳವಾದ ಬಿತ್ತಲ್ ಭಾಗ್ ಮಾರುತಿ ದೇವಸ್ಥಾನದ ಹತ್ತಿರ ರಾಷ್ಟ್ರೀಯ ಹೆದ್ದಾರಿಯಲ್ಲಿ ಕರೆದುಕೊಂಡು ಹೋಗಿದ್ದು ಅಲ್ಲಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಅಪಘಾತ ಸ್ಥಳದ ಪಂಚನಾಮೆಯನ್ನು ತಯಾರಿಸಿ , ನಕಾಶೆಯನ್ನು ತಯಾರಿಸಿರುತ್ತಾರೆ ಮತ್ತು ಆ ಸಮಯದಲ್ಲಿ ಘಟನಾ ಸ್ಥಳದ ಭಾವಚಿತ್ರಗಳನ್ನು ತೆಗೆದಿರುತ್ತಾರೆ. ಘಟನಾ ಸ್ಥಳದಲ್ಲಿ ಒಂದು ಹೆಲ್ಮೆಟ್ ಇದ್ದು , ಪಂಚನಾಮೆಯನ್ನು ಮಾಡುವ ಕಾಲಕ್ಕೆ ಪೋಲೀಸರು ಸದರಿ ಹೆಲ್ಮೆಟ್ ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ.

ಸಾಕ್ಷಿಯು ಪೋಲೀಸರು ನೀಡಿದ ನೋಟೀಸನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-1 ಹಾಗೂ ಸದರಿ ನೋಟೀಸ್ ನಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ನಿ.ಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ವಾಹನ ಪರಿಶೀಲನಾ ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ-2 ಮತ್ತು ನಿ.ಪಿ-2(ಎ) ಎಂದು ಗುರುತಿಸಲಾಯಿತು . ಸಾಕ್ಷಿಯು ವಾಹನ ಪರಿಶೀಲನಾ ಪಂಚನಾಮೆಯ ಕಾಲಕ್ಕೆ ತೆಗೆದ ನಾಲ್ಕು ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ-3 ರಿಂದ ನಿ.ಪಿ-6 ಎಂದು ಗುರುತಿಸಲಾಯಿತು . ಸಾಕ್ಷಿಯು ಅಪಘಾತ ಸ್ಥಳದ ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ

ನಿ.ಪಿ-7 ಮತ್ತು ನಿ.ಪಿ-7(ಎ) ಎಂದು ಗುರುತಿಸಲಾಯಿತು . ಸಾಕ್ಷಿಯು ಕಚ್ಚಾ ನಕಾಶೆ ಮತ್ತು ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ-8 ಮತ್ತು ನಿ.ಪಿ-8(ಎ) ಎಂದು ಗುರುತಿಸಲಾಯಿತು . ಸಾಕ್ಷಿಯು ಘಟನಾ ಸ್ಥಳದಲ್ಲಿ ತೆಗೆದ ಎರಡು ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ-9 ಮತ್ತು ನಿ.ಪಿ-10 ಎಂದು ಗುರುತಿಸಲಾಯಿತು . ಸಾಕ್ಷಿ ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಹೆಲ್ಮೆಟ್ ನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ ಎನ್ ಜೆ ನ್ಯಾಯವಾದಿರವರಿಂದಃ**

ಅಪಘಾತದಲ್ಲಿ ಮೃತಪಟ್ಟ ಜಗದೀಪ ನಾಗೇಕರ್ ಇವರು ನನ್ನ ದೂರದ ಸಂಬಂಧಿಕರು ಇರುತ್ತಾರೆ. ಘಟನಾ ಸ್ಥಳವನ್ನು ಚಾಸಾ-1 ರವರು ತೋರಿಸಿರುತ್ತಾರೆ. ಪೋಲಿಸರು ನಮಗೆ ದೂರವಾಣಿ ಕರೆ ಮಾಡಿ ಪಂಚನಾಮೆಗೆ ಬರುವಂತೆ ತಿಳಿಸಿರುತ್ತಾರೆ. ಅಪಘಾತದಲ್ಲಿ ಭಾಗಿಯಾದ ವಾಹನಗಳ ನೋಂದಣಿ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ನಾನು ಆ ದಿನ ಪೋಲೀಸ ಠಾಣೆಗೆ ಹೋಗಿರುವುದಿಲ್ಲ, ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಯಾವುದೇ ವಾಹನ ಪರಿಶೀಲನಾ ಪಂಚನಾಮೆ ಅಥವಾ ಘಟನಾ ಸ್ಥಳದ ಪಂಚನಾಮೆ ಮಾಡಿರುವುದಿಲ್ಲ, ನಕಾಶೆ ತಯಾರಿಸಿರುವುದಿಲ್ಲ, ಭಾವ ಚಿತ್ರ ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದಲ್ಲಿ ಮೃತ ಪಟ್ಟ ಜಗದೀಪ್ ನಾಗೇಕರ್ ಹಾಗೂ ಈ ಪ್ರಕರಣದ ಚಾಸಾ-1 ರವರು ನನ್ನ ಸಂಬಂದಿಕರಾಗಿದ್ದುದ್ದರಿಂದ ಸದರಿ ಜಗದೀಪ್ ನಾಗೇಕರ್ ಇವರಿಗೆ ಕುಟುಂಬಕ್ಕೆ ಅಪಘಾತ ವಿಮೆ ಬರಲಿ ಎನ್ನುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳ ಹಾಗೂ ವಾಹನ ಪರಿಶೀಲನಾ ಪಂಚನಾಮೆಯನ್ನು ಪೋಲೀಸರು ನಾವು ಠಾಣೆಗೆ ಹೋಗುವ ಪೂರ್ವದಲ್ಲಿಯೇ ಬರೆದು ತಯಾರಿಸಿದ್ದು, ಅವರ ಕೋರಿಕೆಯ ಮೇರೆಗೆ ಪೋಲೀಸ ಠಾಣೆಯಲ್ಲಿ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ-2 ನನ್ನ ಸಂಬಂಧಿಕರು ಇರುವುದಿಲ್ಲ. ಮೃತ ಜಗದೀಪ ನಾಗೇಕರ್ ಇವರು ನನ್ನ ಹತ್ತಿರದ ಸಂಬಂದಿ ಇರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರು ಘಟನಾ ಸ್ಥಳದಲ್ಲಿ ಮು.ಮಾ-1 ನ್ನು ಜಪ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**ಸಹಿ ಇದೆ .**

**ಪ್ರ.ದ.ನ್ಯಾದಂ. ಕಾರವಾರ**